ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆ

ಕರ್ನಾಟಕ ವಿಧಾನ ಪರಿಷತ್ತು

ನೂರ ನಲವತ್ತೊಂದನೆಯ ಅಧಿವೇಶನ

ಗುರುವಾರ, ದಿನಾಂಕ : 24 ನೇ ಸೆಪ್ಟೆಂಬರ್, 2020

ವಿದ್ಯುತ್ ಪರಿವರ್ತಕ (ಟ್ರಾನ್ಸ್‌ಫಾರ್ಮರ್) ಅಳವಡಿಕೆಯಲ್ಲಿ ಅಕ್ರಮ ಬಗ್ಗೆ

ಶ್ರೀ ಬಿ. ಕೆ. ಹರಿಪ್ರಸಾದ್(ವಿಧಾನಸಭೆಯಿಂದ ಚುನಾಯಿತರಾದವರು) -

464 (471) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ -

(ಅ) 2015-16, 2016-17ರಲ್ಲಿ ಮೆಸ್ಕಾಂ (ಮಂಗಳೂರು ವಿದ್ಯುತ್ ಸರಬರಾಜು ಕಂಪನಿ) ವ್ಯಾಪ್ತಿಯ ಶಿವಮೊಗ್ಗ ಜಿಲ್ಲೆಯ ಸೊರಬ ವಿಭಾಗದಲ್ಲಿ ಅಕ್ರಮ-ಸಕ್ರಮದಲ್ಲಿ ಎಷ್ಟು ಅರ್ಜಿದಾರರಿಗೆ 25 ಕೆವಿ ವಿದ್ಯುತ್ ಪರಿವರ್ತಕ (ಟ್ರಾನ್ಸ್‌ಫಾರ್ಮರ್) ಮಂಜೂರು ಮಾಡಲಾಗಿದೆ; (ಅರ್ಜಿದಾರರ ಹೆಸರು, ಗ್ರಾಮದ ವಿವರ ನೀಡುವುದು)

(ಆ) ಸೊರಬ ತಾಲ್ಲೂಕು, ಗುಡ್ಡೆಕೊಪ್ಪ ಗ್ರಾಮದಲ್ಲಿ ಮಂಜೂರಾದ ಅರ್ಜಿದಾರರ ವರ್ಕ್ ಅವಾರ್ಡ್ ಜಿ.ಕೆ.ಈ.ಪಿ. 3468/3469 (ಡಿ.38042, ದಿ: 31.03.2016) ಅಡಿಯಲ್ಲಿ ಮಂಜೂರಾದ ವಿದ್ಯುತ್ ಪರಿವರ್ತಕ (ಟ್ರಾನ್ಸ್‌ಫಾರ್ಮರ್) ಅಳವಡಿಸುವಲ್ಲಿ ಸ್ಥಳೀಯ ಗುತ್ತಿಗೆದಾರರೊಂದಿಗೆ ಮೆಸ್ಕಾಂ ಇಲಾಖೆಯವರು ಶಾಮೀಲಾಗಿ ದಿ. 04-05-2016ರಲ್ಲಿಯೆ, ಕಾಮಗಾರಿ ಪೂರ್ಣಗೊಳಿಸಿರುವುದಾಗಿ ರೂ. 2,42,944/-ಗಳನ್ನು ಡ್ರಾ ಮಾಡಿ ಮಂಜೂರಾದ ಅರ್ಜಿದಾರರ ಸಹಿಯನ್ನು ಸಹ ನಕಲು ಮಾಡಿ, ಮಂಜೂರಾದ ಅರ್ಜಿದಾರರನ್ನು ಬಿಟ್ಟು ಬೇರೆಯವರಿಗೆ ವಿದ್ಯುತ್ ಪರಿವರ್ತಕ (ಟ್ರಾನ್ಸ್‌ಫಾರ್ಮರ್) ಅಳವಡಿಸಿ ಅಕ್ರಮವೆಸಗಿರುವ ಬಗ್ಗೆ ಅರ್ಜಿದಾರರು ದೂರು ನೀಡಿರುವುದು ನಿಜವೇ; (ಸಂಪೂರ್ಣ ಮಾಹಿತಿ ನೀಡುವುದು)

(ಇ) ದೂರು ನೀಡಿರುವ ಅರ್ಜಿದಾರರಿಗೆ ಮಂಜೂರಾಗಿರುವ ವಿದ್ಯುತ್ ಪರಿವರ್ತಕ (ಟ್ರಾನ್ಸ್‌ಫಾರ್ಮರ್) ಅಳವಡಿಸಲಾಗಿದೆಯೇ;

(ಈ) ಇಂತಹ ಇನ್ನೂ ಎಷ್ಟು ಪ್ರಕರಣಗಳಲ್ಲಿ ದೂರುಗಳು ಬಂದಿವೆ; ಈ ಬಗ್ಗೆ ಸರ್ಕಾರ ಯಾವ ಕ್ರಮ ಕೈಗೊಳ್ಳುವುದು? (ದೂರುಗಳು ಬಂದಲ್ಲಿ, ದೂರಿನ ಪ್ರತಿ ನೀಡುವುದು)